# ಕರ್ನಾಟಕ ಸರ್ಕಾರ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

ಸಂಖ್ಯೆ:ಹಿಆಸ/21/15-16 ದಿನಾಂಕ: 07.05.2016

**ಇವರಿಗೆ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಪದವೀಧರ ಕಿರಿಯ ಮಹಿಳಾ/ಪುರುಷ ಆರೋಗ್ಯ ಸಹಾಯಕರ ವೃಂದದಲ್ಲಿ ಶೇ.100ಕ್ಕೆ 100 ರಷ್ಟು ಹುದ್ದೆಗಳನ್ನು ಪದೋನ್ನತಿ ಹುದ್ದೆಗಳೆಂದು ಪರಿಗಣಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಪತ್ರ ಸಂ: ಆಕುಕ 24 ಹೆಚ್‌ಪಿಸಿ 2015, ದಿನಾಂಕ: 18.09.2015.
2) ಕರ್ನಾಟಕ ಆರೋಗ್ಯ ಶಿಕ್ಷಣಾಧಿಕಾರಿಗಳ ಸಂಘ(ರಿ), ಬೆಂಗಳೂರು. ಇವರ ಪತ್ರ ಸಂ: 02/2014-15, ದಿನಾಂಕ: 29.12.2014.
3) ಸರ್ಕಾರದ ಪತ್ರ ಸಂ: ಆಕುಕ 3 ಎಂಎಸ್‌ಎನ್ 2016, ದಿನಾಂಕ: 11.02.2016

* * * * *

ಉಲ್ಲೇಖ(3)ಕ್ಕೆ ಸಂಬಂಧಿಸಿದಂತೆ, ಹೈ-ಕ ಭಾಗ ಹೊರತುಪಡಿಸಿ -617 ಹೈ-ಕ ಭಾಗದ 203 ಪದವೀಧರ ಕಿರಿಯ ಮಹಿಳಾ/ಪುರುಷ ಆರೋಗ್ಯ ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು, ಇವರುಗಳಿಗೆ ವೃಂದ ಮತ್ತು ನೇಮಕಾತಿ ನಿಯಮಾನುಸಾರ ಶೇ.50% ರಷ್ಟು ಪದೋನ್ನತಿಗೆ ಅವಕಾಶವಿರುತ್ತದೆ. ಕಳೆದ 20 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಪದವೀಧರ ಕಿರಿಯ ಮಹಿಳಾ/ಪುರುಷ ಆರೋಗ್ಯ ಸಹಾಯಕರುಗಳು ಪದೋನ್ನತಿಗೆ ಅರ್ಹರಿದ್ದು, ಪದೋನ್ನತಿ ಅವಕಾಶ ಕಡಿಮೆ ಇರುವುದರಿಂದ ನೇರ ನೇಮಕಾತಿ ಬದಲಾಗಿ ಶೇ.100ಕ್ಕೆ 100 ರಷ್ಟು ಪದವೀಧರ ಆರೋಗ್ಯ ಸಹಾಯಕರುಗಳಿಗೆ ಪದೋನ್ನತಿ ನೀಡಲು ಉಲ್ಲೇಖ(2)ರಲ್ಲಿ ಮನವಿ ಸಲ್ಲಿಸಿರುತ್ತಾರೆ.

ಆದುದರಿಂದ ಪದವೀಧರ ಕಿರಿಯ ಮಹಿಳಾ/ಪುರುಷ ಆರೋಗ್ಯ ಸಹಾಯಕರುಗಳಿಗೆ ಶೇ.100ಕ್ಕೆ 100% ಪದೋನ್ನತಿ ನೀಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ತಿದ್ದುಪಡಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ತಮ್ಮ ನಂಬುಗೆಯ,

ನಿರ್ದೇಶಕರು,
ಆರೋಗ್ಯ ಮತ್ತು ಕು.ಕ. ಸೇವೆಗಳು.